## 5. ರಾಜಾ ರಂಗಪ್ಪನಾಯಕ, ಮಾಜಿ ಸಂಸದ

ರಾಯಚೂರು ಲೋಕಸಭಾ ಕ್ಷೇತ್ರದ ಮಾಜಿ ಸಂಸದ ರಾಜಾ ರಂಗಪ್ಪನಾಯಕ ಅವರು ದಿನಾಂಕ:11.05.2020ರಂದು ನಿಧನರಾದರು.

ಅಭಿವೃದ್ದಿ ಹರಿಕಾರ ಮತ್ತು ಬಡವರ ಬಂಧು ಎಂದೇ ಛಾಪು ಮೂಡಿಸಿದ್ದರು. 1959ರ ಮೇ 24ರಂದು ಜನಿಸಿದ್ದ ಅವರು ಸುರಪುರ ಮತ್ತು ಹೈದರಾಬಾದ್‌ನಲ್ಲಿ ಶಿಕ್ಷಣ ಪಡೆದು 1987–92ರಲ್ಲಿ ಖಾನಾಪುರ ಎಸ್. ಎಚ್. ಮಂಡಲ ಪ್ರಧಾನರಾಗಿ ಆಯ್ಕೆಯಾಗಿ ರಾಜಕೀಯ ಜೀವನ ಆರಂಭಿಸಿದರು. 1992ರಲ್ಲಿ ಖಾನಾಪುರ ಎಸ್ ಎಚ್ ಜಿಲ್ಲಾ ಪಂಚಾಯಿತಿ ಕ್ಷೇತ್ರದಿಂದ ಚುನಾಯಿತರಾಗಿ ಗುಲಬರ್ಗಾ ಜಿಲ್ಲಾ ಪಂಚಾಯತಿನಲ್ಲಿ ಆರೋಗ್ಯ ಮತ್ತು ಶಿಕ್ಷಣ ಸ್ಥಾಯಿ ಸಮಿತಿ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು. 1996ರಲ್ಲಿ 11ನೇ ಲೋಕಸಭೆಗೆ ರಾಯಚೂರು ಲೋಕಸಭಾ ಕ್ಷೇತ್ರದಿಂದ ಜೆ.ಡಿ.ಎಸ್. ಅಭ್ಯರ್ಥಿಯಾಗಿ ಸ್ಪರ್ಧಿಸಿ ಪ್ರಥಮ ಬಾರಿಗೆ ಸಂಸತ್ ಸದಸ್ಯರಾಗಿ ಆಯ್ಕೆಯಾಗಿದ್ದರು.

ಆಧಾರ:ಉದಯವಾಣಿ, ದಿನಾಂಕ:12.05.2020